## ಬಕಿಂಗ್ ಹ್ಯಾಮ್ ಅರಮನೆ – ರಾಣಿಯ ಮನೆ

*ಲಂಡನ್ನಿನಲ್ಲಿರುವ ಬಕಿಂಗ್ ಹ್ಯಾಮ್ ಅರಮನೆ ಹಲವು ವಿಶೇಷಗಳ ಬೀಡು. ೬೦೦ ಕೋಣೆಯಿಂದ ಕೂಡಿದ ಈ ಅರಮನೆಯ ಮೊಸಾಲೆಯ ಉದ್ದ ೨.೫ ಕಿ.ಮೀ.ನಷ್ಟು. ರಾಜವೈಭವದಿಂದ ಈಗಲೂ ಮೆರೆಯುವ ಈ ಅರಮನೆ ನಿತ್ಯ ಹತ್ತಾರು ಚಟುವಟಿಕೆಗಳ ಆಗರ.*

ಪ್ರಪಂಚದ ವಿವಿಧ ದೇಶಗಳಿಗೆ ತನ್ನದೇ ಆದ ಇತಿಹಾಸ ಹಾಗೂ ಪರಂಪರೆ ಇದೆ. ಇತಿಹಾಸದ ಪುಟಗಳನ್ನು ತಿರುವಿ ಹಾಕಿದಾಗ ನಮಗೆ ಆಯಾ ದೇಶದ ಸಂಪ್ರದಾಯ, ಸಂಸ್ಕೃತಿಗಳಿಗೆ ಅಡಿಪಾಯ ಹಾಕಿದ ರಾಜ ವಂಶಗಳ ವೈಭವದ ಬಗ್ಗೆ ಅರಿವಾಗುತ್ತದೆ. ಭಾರತದೇಶದಲ್ಲಿಯೂ, ನಮ್ಮ ಸಂಸ್ಕೃತಿಯನ್ನು ಬೆಳೆಸಿದ ರಾಜಮಹಾರಾಜರುಗಳು ವೈಭವದಿಂದ ರಾಜ್ಯವಾಳುತ್ತಾತಮ್ಮ ಪ್ರಜೆಗಳಿಗೆ ಸುಖಶಾಂತಗಳನ್ನು ನೀಡಿದ್ದರು. ಆದರೆ ನಾಗರೀಕತೆಯು ಬೆಳೆದಂತೆಲ್ಲಾ ಹೊಸ ರೀತಿಯ ಪ್ರಜಾತಂತ್ರಗಳು ತಲೆಯೆತ್ತಿ ರಾಜಮನೆತನಗಳ ಭವ್ಯ ಪರಂಪರೆಯನ್ನು ಅಂತ್ಯಗೊಳಿಸಿದವು. ಆದರೂ ಕೆಲವು ದೇಶಗಳಲ್ಲಿ ಈಗೂ ರಾಜಪರಿವಾರದ ಆಳ್ವಿಕೆಯಿದೆ. ಅವುಗಳಲ್ಲಿ ಬ್ರಿಟನ್ನಿನ ರಾಜ ಮನೆತನವೊಂದೇ ತನ್ನ ಹಿಂದಿನ ರಾಜ ವೈಭವ ಹಾಗೂ ಗೌರವಗಳನ್ನೂ ಈಗಲೂ ಉಳಿಸಿಕೊಂಡಿದೆ. ಚುನಾಯಿತ ಪ್ರಜಾಸತ್ತಾತ್ಮಕ ಸರ್ಕಾರ ಆಡಳಿತ ವಹಿಸಿ ಕೊಂಡಿದ್ದರೂ ಸಹ ಇಲ್ಲಿ ರಾಣಿ ಹಾಗೂ ರಾಜರಿಗೆ ವಿಶೇಷ ಸ್ಥಾನಮಾನಗಳು ಇಂದಿಗೂ ಇದೆ. ಬ್ರಿಟನ್ ರಾಜವಂಶದ ಅಧಿಕೃತ ವಾಸಸ್ಥಾನ "ಬಕಿಂಗ್ ಹ್ಯಾಮ್ ಅರಮನೆ" ತನ್ನ ಐತಿಹಾಸಿಕ ಮಹತ್ವವನ್ನು ಕಾಪಾಡಿಕೊಂಡು ಬಂದಿದೆ. ಈ ಅರಮನೆಯಲ್ಲಿನ ವೈಭವ ಮತ್ತು ಕಾರ್ಯ ಚಟುವಟಿಕೆಗಳನ್ನು ಈ ಲೇಖನದಲ್ಲಿ ಸಂಕ್ಷಿಪ್ತವಾಗಿ ವಿವರಿಸಲಾಗಿದೆ.

ಲಂಡನ್ನಿನಲ್ಲಿರುವ "ಬಕಿಂಗ್ ಹ್ಯಾಮ್ ಅರಮನೆ" ಬ್ರಿಟನ್ನಿನ ಐತಿಹಾಸಿಕ ರಾಜಮನೆತದ ಅಧಿಕೃತ ವಾಸಸ್ಥಾನ. ವಿಕ್ಟೋರಿಯಾ ರಾಣಿ ಸುಮಾರು ೧೫೦ ವರ್ಷಗಳ ಹಿಂದೆ (ಅಂದರೆ ೧೮೩೭ರಲ್ಲಿ) ಅಧಿಕಾರ ವಹಿಸಿಕೊಂಡಾಗಿನಿಂದ ಈ ಅರಮನೆ ರಾಜಮನೆತನದ ಅಧಿಕೃತ ಭವನವಾಗಿದೆ.

೧೯೫೨ರಲ್ಲಿ ಎಲಿಜಬೆತ್ (ಖಖ) ಸಿಂಹಾಸನಾರೂಢಳಾದ ಮೇಲೆ ಎಡಿನ್ ಬರ್ಗನ್ ದೊರೆ ಹಾಗೂ ಎಲಿಜಬೆತ್ ಇದೇ ಅರಮನೆಯಲ್ಲಿ ವಾಸಿಸುತ್ತಿದ್ದಾರೆ. ಬ್ರಿಟನ್ನಿನ ರಾಜಧಾನಿಯಾದ ಲಂಡನ್ನಿನಲ್ಲಿರುವ ಈ ಅರಮನೆಯಲ್ಲೇ ರಾಣಿ ವಾರದ ಬಹುಭಾಗವನ್ನು ಕಳೆಯುತ್ತಾರೆ. ವಾರಾಂತ್ಯವನ್ನು ಮಾತ್ರ ಅರಮನೆಯಿಂದ ೪೦ ಕಿ.ಮೀ. ದೂರದಲ್ಲಿರುವ ವಿಂಡ್ಸರ್ ಕ್ಯಾಸೆಲನಲ್ಲಿ ಕಳೆಯುತ್ತಾರೆ.

### ಹಿನ್ನೆಲೆ

ಈ ಮೊದಲು ಇದೇ ನಿವೇಶದಲ್ಲಿದ್ದ ಕಟ್ಟಡವನ್ನು 'ಬಕಿಂಗ್ ಹ್ಯಾಮ್ ಹೌಸ್' ಎಂದು ಕರೆಯಲಾಗುತ್ತಿತ್ತು. ಸುಮಾರು ೩೦೦ ವರ್ಷಗಳ ಹಿಂದೆ '"ಬಕಿಂಗ್ ಹ್ಯಾಮ್ ಹೌಸ್' ಕಟ್ಟಡವನ್ನು ಎಡಿನಬರ್ಗನ ದೊರೆ ಜಾನ್ ಶೆಫ್ಫಿಲ್ಡ್ ಕಟ್ಟಿಸಲು ಪ್ರಾರಂಭಿಸಿದನು. ೧೭೦೮ರಲ್ಲಿ ಈ ಕಟ್ಟಡದ ನಿರ್ಮಾಣ ಪೂರ್ಣವಾಯಿತು. ನಂತರ ೧೭೬೦ರಿಂದ ೧೮೨೦ರವರೆಗೆ ರಾಜ್ಯವಾಳಿದ ಜಾರ್ಜ್ ಖಖಖ ೨೮,೦೦೦ ಪೌಂಡುಗಳಿಗೆ ಈ ಭವನವನ್ನು ಖರೀದಿಸಿ, ನವೀನವಾಗಿ ವಿನ್ಯಾಸಗೊಳಿಸಿ ಪುನರ್ನಿರ್ಮಿಸಿದನು. ಇದೇ ಈಗಿರುವ 'ಬಕಿಂಗ್ ಹ್ಯಾಮ್ ಅರಮನೆ'.

ಈ ಅರಮನೆ ಅತಿ ಭವ್ಯವಾಗಿದ್ದು ಸುಮಾರು ೬೦೦ ಕೋಣೆಗಳಿವೆ. ಅರಮನೆಯ ಮೊಗಸಾಲೆಯ ಉದ್ದವೇ ೨.೫ ಕಿ.ಮೀ.ನಷ್ಟಿದೆ. ರಾಜಮನೆತನದ ಅಧಿಕೃತ ವಾಸಸ್ಥಾನವಾಗಿ ಮಾರ್ಪಾಡಾದಾಗಿನಿಂದ 'ಬಕಿಂಗ್ ಹ್ಯಾಮ್

ಅರಮನೆ’ಯು ಶ್ರೇಷ್ಠ ಭೋಜನಕೂಟಗಳು ಹಾಗೂ ಅತ್ಯದ್ಭುತ ಸಮಾರಂಭಗಳಿಗೆ ಸ್ಥಾನವಾಗಿದೆ. ಬ್ರಿಟಿಷ್ ದೊರೆಗಳು ಇದೇ ಅರಮನೆಯಲ್ಲಿ ವಿವಿಧ ದೇಶಗಳ ಮುಖಂಡರು ಮತ್ತು ಚಕ್ರವರ್ತಿಗಳನ್ನು ಸ್ವಾಗತಿಸುತ್ತಾರೆ.

ಪ್ರತಿವರ್ಷವೂ ಲಂಡನ್ ನೋಡಲು ಬರುವ ಸಹಸ್ರಾರು ಮಂದಿ ಪ್ರವಾಸಿಗರು ಅರಮನೆಯ ಆವರಣದ ಹೊರಗೆ ನಿಂತು ಆವರಣದ ಸುತ್ತಲೂ ಹಾಕಿರುವ ಕಟಾಂಜನದ ಮಧ್ಯೆ ತಲೆಯಿಟ್ಟು, ರಾಜಮನೆತನದ ಸದಸ್ಯರ ಮುಖದರ್ಶನ ಆಗಬಹುದೇನೋ ಎಂಬ ನಿರೀಕ್ಷೆಯಲ್ಲಿ, ಕಟ್ಟಡದಲ್ಲಿರುವ ಹತ್ತಾರು ಕಿಟಕಿಗಳನ್ನು ದಿಟ್ಟಿಸಿ ನೋಡುತ್ತಿರುತ್ತಾರೆ.

ಈ ಭವ್ಯ ಅರಮನೆಯ ಒಳಗೆ ರಾಜರಾಣಿಯರ ನಿತ್ಯ ಜೀವನ ಹೇಗೆ ಸಾಗುತ್ತದೆ. ಇಷ್ಟು ದೊಡ್ಡ ಅರಮನೆಯಲ್ಲಿ ತಮ್ಮ ಕಾರ್ಯ ಚಟುವಟಿಕೆಗಳನ್ನು ಅವರು ಹೇಗೆ ನಿಭಾಯಿಸುತ್ತಾರೆ ಎಂಬುದರ ಬಗ್ಗೆ ಜನಸಾಮಾನ್ಯರಲ್ಲಿ ಸಹಜವಾಗಿಯೇ ಕುತೂಹಲ ಮೂಡುತ್ತದೆ. ಆದರೆ ರಾಣಿ ಎಲಿಜಬೆತ್ ರಿಗೆ ಮಾತ್ರ ಈ ಅರಮನೆಯು ತಾವು ಬಾಲ್ಯದಿಂದಲೂ ಬೆಳೆದು ಬಂದ ಮನೆಯೇ ಆಗಿದೆ.

ಅರಮನೆಯ ಕೆಲಭಾಗವನ್ನು ರಾಜ್ಯಾಡಳಿತದಲ್ಲಿ ಅಧಿಕೃತ ಕೋಣೆಗಳಾಗಿ ಪರಿವರ್ತಿಸಲಾಗಿದೆ. ಈ ಕೋಣೆಗಳಾಲ್ಲಿ ರಾಣಿಯ ನೇತೃತ್ವದಲ್ಲಿ, ಅಧಿಕೃತ ಸ್ವಾಗತ ಸಮಾರಂಭಗಳು, ಭೋಜನಕೂಟಗಳು ಹಾಗೂ ಅಧಿಕಾರ ವಹಿಸಿಕೊಡುವ ಕಾರ್ಯಕ್ರಮಗಳು ನಡೆಯುತ್ತವೆ. ಆದ್ದರಿಂದ ಈ ಕೋಣೆಗಳನ್ನು ಸಾಮಾನ್ಯ ನಿತ್ಯ ಜೀವನಕ್ಕೆ ಬಳಸಿಕೊಳ್ಳಳಾಗುವುದಿಲ್ಲ. ಆದರೆ ಈ ಕೋಣೆಗಳಲ್ಲಿನ ಅಲಂಕಾರ ಹಾಗೂ ಶೃಂಗಾರಗಳಿಗೆ ರಾಣಿಯು ಹೆಚ್ಚಿನ ಆಸಕ್ತಿ ನೀಡುತ್ತಾರೆ. ಈ ಕೋಣೆಗಳನ್ನು ವಿಶೇಷ ರೀತಿಯಲ್ಲಿ ಕುರ್ಚಿ, ಮೇಜು, ರತ್ನಗಂಬಳಿಗಳಿಂದ ಸಜ್ಜುಗೊಳಿಸುವುದಕ್ಕೆ ಮೊದಲು ರಾಣಿಯ ಅನುಮತಿಯನ್ನು ಪಡೆಯಬೇಕಾಗುತ್ತದೆ.ಅರಮನೆಯ ಇನ್ನೂ ಅನೇಕ ಕೋಣೆಗಳನ್ನು ರಾಜಮನೆತನದ ಸದಸ್ಯರ ಅವಸ್ಯಕತೆಗಳನ್ನು ಪೂರೈಸುವುದಕ್ಕಾಗಿ ಕಚೇರಿಗಳಾಗಿ ಮಾರ್ಪಡಿಸಲಾಗಿದೆ.

ಸುಮಾರು ೩೦೦ ಮಂದಿ ಅರಮನೆಯ ನೌಕರ ವರ್ಗ, ಅರಮನೆಯ ನಿತ್ಯ ಚಟುವಟಿಕೆಗಳು ಸಾಂಗವಾಗಿ ಸಾಗುವಂತೆ ನೋಡಿಕೊಳ್ಳುತ್ತಾರೆ.ಬಾಣಸಿಗರು, ಸ್ವಚ್ಛಗೊಳಿಸುವ ನೌಕರರು, ಕಚೇರಿ ಕೆಲಸ ಕಾರ್ಯಗಳನ್ನು ನೋಡಿಕೊಳ್ಳುವ ಉದ್ಯೋಗಿಗಳು, ಸೇವಕರು, ಕಿಟಕಿ ಸ್ವಚ್ಛಗೊಳಿಸುವವರು ಮುಂತಾದ ಹತ್ತು ಹಲವಾರು ನೌಕರರು ಇಲ್ಲಿ ಕಾರ್ಯಮಗ್ನರಾಗಿರುತ್ತಾರೆ. ಕಿಟಕಿ ಗಾಜನ್ನು ಶುಚಿಗೊಳಿಸುವವರಿಗೆ ಅರಮನೆಯಲ್ಲಿ ಪೂರ್ಣಾವಧಿ ಕೆಲಸ. ಅರಮನೆಯ ಒಂದು ಭಾಗದಲ್ಲಿಯೇ ನೌಕರವರ್ಗದವರು ವಾಸಿಸುತ್ತಾರೆ.

ಬ್ರಿಟನ್ ಸರ್ಕಾರದ ಪರಿಸರ ಇಲಾಖೆಯು ಪುಷ್ಪ ಅಲಂಕಾರ ಮಾಡುವವರನ್ನು ಹೊಂದಿದೆ. ಅರಮನೆಯ ಎಲ್ಲಾ ಕೋಣೆಗಳೂ ತಾಜಾ ಹೂವುಗಳಿಂದ ಅಲಂಕೃತವಾಗಿರುವಂತೆ ನೋಡಿಕೊಳ್ಳುವುದು ಇವರ ಕೆಲಸವಾಗಿರುತ್ತದೆ. ಇವರು ಪುಷ್ಪಲಂಕಾರ ಕಲೆಯಲ್ಲಿ ಪರಿಣಿತಿಯನ್ನು ಹೊಂದಿದವರಾಗಿದ್ದು ಎಂಥಾ ಸಮಾರಂಭಕ್ಕಾದರೂ ಅಲಂಕಾರವನ್ನು ಮಾಡಲು ಸಮರ್ಥರಾಗಿರುತ್ತಾರೆ.

ಇಲ್ಲಿನ ಒಂದು ಅತಿ ವಿಚಿತ್ರವಾದ ಕೆಲಸವೆಂದರೆ, ಅರಮನೆಯಲ್ಲಿರುವ ಅನೇಕ ಗಡಿಯಾರಗಳನ್ನು ಸರಿಯಾದ ಚಾಲನೆಯಲ್ಲಿ ಇಡುವುದು ಹಾಗೂ ಸರಿಪಡಿಸುವುದು. ಇದನ್ನು ಒಬ್ಬ ನಿಪುಣ ಗಡಿಯಾರ ರಿಪೇರಿ ತಜ್ಞನಿಗೆ ವಹಿಸಲಾಗಿದ್ದು ಅವನ ಕಾರ್ಯಾಗಾರವು ಅರಮನೆಯ ಆವರಣದಲ್ಲಿಯೇ ಇದೆ. ಇವನು ವರ್ಷದಲ್ಲಿ ಎರಡು ಬಾರಿ ವಿಶೇಷವಾಗಿ ಕಾರ್ಯಪ್ರವೃತ್ತನಾಗಿರುತ್ತಾನೆ. ಬ್ರಿಟಿಷ್ ಬೇಸಿಗೆ ಕಾಲದ ಪ್ರಾರಂಭ ಅಥವಾ ಅಂತ್ಯದ ಸಮಯದಲ್ಲಿ ಗಡಿಯಾರಗಳನ್ನು ಒಂದು ಘಂಟೆ ಹಿಂದೆ ಅಥವಾ ಮುಂದೆ ಇಡಬೇಕಾಗುತ್ತದೆ.

ಅರಮನೆಯ ದಿನನಿತ್ಯದ ಕಾರ್ಯಚಟುವಟಿಕೆಗಳನ್ನು ನೋಡಿಕೊಳ್ಳುವ ನೌಕರ ವರ್ಗದ ಜೊತೆಗೆ ರಾಣಿಯ ವೈಯಕ್ತಿಕ ಸೌಕರ್ಯಗಳನ್ನು ನೋಡಿಕೊಳ್ಳುವುದಕ್ಕಾಗಿ ವಿಶೇಷ ನೌಕರವರ್ಗವಿದೆ ಅವರಲ್ಲಿ ರಾಣಿಯ ಕೇಶಾಲಂಕಾರ ಮಾಡುವವಳೂ ಒಬ್ಬಳು. ಇವಳು ರಾಣಿಯೊಂದಿಗೆ ಎಲ್ಲಾ ಪ್ರವಾಸದಲ್ಲಿಯೂ ಇರುತ್ತಾಳೆ. ರಾಣಿಯ ಕೇಶಾಲಂಕಾರವನ್ನು ವಿವಿಧ ಸಮಾರಂಭಗಳಿಗೆ ವಿಶೇಷವಾಗಿ ಸಿಂಗರಿಸುವುದೇ ಈಕೆಯ ಕೆಲಸ.

ಪ್ರತಿವರ್ಷವೂ ರಾಣಿಯು ರಾಜ ವೈಭವದ ಔತಣ ಕೂಟಗಳನ್ನು ಅರಮನೆಯ ಆವರಣದಲ್ಲಿ ಏರ್ಪಡಿಸುತ್ತಾರೆ. ಈ ಔತಣ ಕೂಟದಲ್ಲಿ ಸಮಾಜದ ವಿವಿಧ ರಂಗಗಳಿಂದ ಜನರು ಭಾಗವಹಿಸುತ್ತಾರೆ.ರಾಜ್ಯಾಡಳಿತ ಕಚೇರಿಯ ಸಮಾರಂಭಗಳು ಅದಕ್ಕಾಗಿಯೇ ಮೀಸಲಾಗಿರುವ ಕೋಣೆಗಳಲ್ಲೇ ನಡೆಯುತ್ತವೆ. ಆದರೂ ರಾಣಿಯ ಖಾಸಗಿ ಕೋಣೆಗಳಲ್ಲಿಯೂ ಔತಣಕೂತಗಳು ನಡೆಯುತ್ತಿರುತ್ತವೆ.

ಲಂಡನ್ನಿನಲ್ಲಿ ಜನಜಂಗುಳಿಯ ವಾತಾವರಣವಿದ್ದರೂ ಸಹ ಬಕಿಂಗ್ ಹ್ಯಾಮ್ ಅರಮನೆ ಮಾತ್ರ ನೋಡುಗರ ಕಣ್ಣಿಗೆ ಹರ್ಷೋಲ್ಲಾಸ ನೀಡುತ್ತದೆ. ಬ್ರಿಟನ್ನಿನ ರಾಣಿ ಎಲಿಜಬೆತ್ ೨ಗೆ ಇದುವೇ ಅಧಿಕೃತ ಕಚೇರಿ, ಹೊರದೇಶದ ಮುಖಂಡರನ್ನು ಸ್ವಾಗತಿಸುವ ಸ್ಥಳ ಹಾಗೂ ವಾಸಿಸುವ ಮನೆಯೂ ಆಗಿದೆ.

ಭವ್ಯ ಪರಂಪರೆಯ ತವರೂರಾದ ಇಂಗ್ಲೆಂಡಿನಲ್ಲಿರುವ ಬಕಿಂಗ್ ಹ್ಯಾಮ್ ಅರಮನೆ, ಜನತೆಗೆ ರಾಜಮನೆತನದ ಬಗ್ಗೆ ಇರುವ ಮುಂದುವರೆಯುತ್ತಿರುವ ಭಕ್ತಿ ಹಾಗೂ ಗೌರವಾದರಗಳಿಗೆ ಸಾಕ್ಷಿಯಾಗಿದೆ.

Dec 5th 1993 Hosa Diganta Bunkingham Aramane-Raniya mane